ರಾಜ್ಯದಲ್ಲಿರುವ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಮಳಿಗೆಗಳು.

24 17(3093)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಮಳಿಗೆಗಳೆಷ್ಟು?

ಆ) ಈ ಮಳಿಗೆಗಳಲ್ಲಿನ ವ್ಯಾಪಾರವನ್ನು ವೃದ್ಧಿಗೊಳಿಸಲು ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಸ್. ಆರ್. ಕಾಶಪ್ಪನವರ್(ಸಣ್ಣ ಕೈಗಾರಿಕಾ ಸಚಿವರು):

ಅ) ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ನೇರ ಅಧೀನದಲ್ಲಿರುವ ಮಳಿಗೆ 1, ಮಂಡಳಿಯ ಧನಸಹಾಯದೊಡನೆ ಪ್ರಾರಂಭವಾಗಿರುವ ಮಳಿಗೆಗಳು 196 ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಧನಸಹಾಯದೊಡನೆ ಪ್ರಾರಂಭವಾಗಿರುವ ಮಳಿಗೆಗಳು 176. ಒಟ್ಟು 373 ಮಳಿಗೆಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಆ) ಸರ್ಕಾರವು ಪ್ರತಿವರ್ಷ ಗಾಂಧೀ ಜಯಂತಿ ಸಂದರ್ಭದಲ್ಲಿ 90 ದಿನಗಳ ಕಾಲ ಖಾದಿ ಉತ್ಪನ್ನಗಳ ಮೇಲೆ ಶೇಕಡ 30 ರಿಂದ 40 ರಷ್ಟು ರಿಯಾಯಿತಿ ನೀಡುತ್ತದೆ. ರಿಯಾಯಿತಿ ಘೋಷಣೆಯನ್ನು ದಿನಪತ್ರಿಕೆಗಳಲ್ಲಿ ಜಾಹೀರಾತಿನ ಮುಖಾಂತರ ನೀಡಲಾಗುವುದು. ಖಾದಿ ಗ್ರಾಮೋದ್ಯೋಗ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮಾಡಲು ಮತ್ತು ರಾಜ್ಯಾದ್ಯಂತ ಸಂಘ ಸಂಸ್ಥೆಗಳು ಉತ್ಪಾದಿಸುತ್ತಿರುವ ಉತ್ಪನ್ನಗಳನ್ನು ಖಾದಿ ಭಂಡಾರಗಳಿಗೆ ಸರಬರಾಜು ಮಂಡಳಿಯ ಕೇಂದ್ರ ಕಛೇರಿಯ ಗ್ರಾಮೋದ್ಯೋಗ ವೈಭವ ವಿಶ್ವ ಷೋರೂಂ ಮುಖಾಂತರ ಮಾಡಲಾಗುತ್ತಿದೆ. ರಾಜ್ಯದಲ್ಲಿ ನಡೆಯುವ ವಸ್ತುಪ್ರದರ್ಶನಗಳಲ್ಲಿ ಖಾದಿ ಭಂಡಾರಗಳು ಭಾಗವಹಿಸಿ ಖಾದಿ ಗ್ರಾಮೋದ್ಯೋಗ ಉತ್ಪನ್ನಗಳನ್ನು ಮಾರಾಟ ಮಾಡುತ್ತದೆ. ದಸರಾ ವಸ್ತು ಪ್ರದರ್ಶನದಲ್ಲಿ, ದೆಹಲಿಯಲ್ಲಿ ನಡೆಯುವ ಅಂತರರಾಷ್ಟ್ರೀಯ ವ್ಯಾಪಾರ ಮೇಳದಲ್ಲಿ ತುಮಕೂರಿನಲ್ಲಿ ನಡೆಯುವ ಕೈಕಾಗದ ವಸ್ತುಪ್ರದರ್ಶನದಲ್ಲಿ ಹಾಗೂ ಜಿಲ್ಲೆಗಳಲ್ಲಿ ನಡೆಯುವ ಜಿಲ್ಲಾ ಕೈಗಾರಿಕಾ ವಸ್ತು ಪ್ರದರ್ಶನಗಳಲ್ಲಿ ಖಾದಿ ಭಂಡಾರಗಳು ಭಾಗವಹಿಸುತ್ತವೆ. ಮಂಡಳಿಯು 2 ಸಂಚಾರಿ ವಾಹನಗಳನ್ನು ಖರೀದಿಸಿ ಅವುಗಳ ಮೂಲಕ ನಗರದ ಪ್ರಮುಖ ಸ್ಥಳಗಳಲ್ಲಿ ಖಾದಿ ಗ್ರಾಮೋದ್ಯೋಗ ವಸ್ತುಗಳ ಮಾರಾಟ ಮಾಡಲಾಗುತ್ತಿದೆ. ಖಾದಿ ಉತ್ಪನ್ನಗಳ ಗುಣಮಟ್ಟವನ್ನು ಸುಧಾರಿಸಲು ಸಂಘ ಸಂಸ್ಥೆಗಳ

ಹಾಗೂ ಫಲಾನುಭವಿಗಳಿಗೆ ಉನ್ನತ ತಾಂತ್ರಿಕತೆಯ ತರಬೇತಿ ಏರ್ಪಡಿಸಲಾಗುವುದು. ಖಾದಿ ಗ್ರಾಮೋದ್ಯೋಗ ವ್ಯಾಪಾರವನ್ನು ವೃದ್ಧಿಗೊಳಿಸಲು ದೂರದರ್ಶನ ಹಾಗೂ ಇತರೆ ಮಾಧ್ಯಮಗಳಲ್ಲಿ ಪ್ರಚಾರ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸಮಾಜ ಕಲ್ಯಾಣ ಇಲಾಖೆಗೆ ಕೇಂದ್ರದಿಂದ ದೊರೆತ ಅನುದಾನ

2418(1936)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಕೇಂದ್ರದಿಂದ ದೊರೆತ ಅನುದಾನದ ನೆರವಿನ ಮೊತ್ತವೆಷ್ಟು?(ವರ್ಷಾವಾರು ಮಾಹಿತಿ ನೀಡುವುದು).

ಆ) ಕಳೆದ 3 ವರ್ಷಗಳಲ್ಲಿ ಸಮಾಜ: ಕಲ್ಯಾಣ ಇಲಾಖೆ ವಿವಿಧ ಯೋಜನೆಗಳಿಗೆ ಹಂಚಲಾದ ಅನುದಾನದ ಮೊತ್ತವೆಷ್ಟು? (ವರ್ಷಾವಾರು ಮಾಹಿತಿಯನ್ನು ನೀಡುವುದು).

ಇ) ಕಳೆದ 3 ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಆಯವ್ಯಯದಲ್ಲಿ ಒದಗಿಸಲಾದ ಹಣದ ಮೊತ್ತವೆಷ್ಟು?(ವರ್ಷಾವಾರು ಮಾಹಿತಿ ನೀಡುವುದು).

ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿಯವರ ಕಲ್ಯಾಣಕ್ಕಾಗಿ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ದೊರೆತ ಅನುದಾನದ ನೆರವಿನ ವಿವರವನ್ನು ಈ ಕೆಳಕಂಡಂತೆ ತೋರಿಸಲಾಗಿದೆ.

	ರೂ.ಲಕ್ಷಗಳಲ್ಲಿ
1997-98	1509.66
1998-99	2190.07
1999-2000	3926.64

ಆ ಮತ್ತು ಇ) ಕಳೆದ ಮೂರು ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿವಿಧ ಯೋಜನೆಗಳಿಗೆ ಒದಗಿಸಲಾದ ಹಣದ ವಿವರವನ್ನು ಈ ಕೆಳಗೆ ತಿಳಿಸಲಾಗಿದೆ.